ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

71 ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ

1-11-2026



ಸೆಂಟ್ರಲ್ ಕಾಲೇಜ್ ಮೈದಾನದಲ್ಲಿ ಏಕೀಕರಣ ಸ್ಮಾರಕ ನಿರ್ಮಾಣ - ಕುಲಪತಿಗಳ ಪ್ರಕಟಣೆ

ಏಕೀಕೃತ ವಿಶಾಲ ಮೈಸೂರು ರಾಜ್ಯ ರಚನೆಯ ಅಧಿಕೃತ ಘೋಷಣೆ ಮೊಳಗಿದ ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ಸ್ಮಾರಕ ನಿರ್ಮಾಣ ಮಾಡುವುದಾಗಿ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ರಮೇಶ್.ಬಿ. ಪ್ರಕಟಿಸಿದ್ದಾರೆ.

ಕಾಲೇಜಿನ ಗಡಿಯಾರ ಗೋಪುರದ ಬಳಿ ಏರ್ಪಡಿಸಲಾಗಿದ್ದ 71ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅತಿಶೀಘ್ರವಾಗಿ ಅದೇ ಐತಿಹಾಸಿಕ ಸ್ಥಳದಲ್ಲಿ ವೈಭವದ ರಾಜ್ಯೋತ್ಸವ ಸಮಾರಂಭ ಆಯೋಜಿಸಲಾಗುವುದೆಂದು ತಿಳಿಸಿದರು.

ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವತಿಯಿಂದ ವರ್ಷವಿಡೀ ನಾಡು, ನುಡಿ, ನೆಲ ಜಲದ ವಿಷಯಗಳ ಕುರಿತಂತೆ ವಿಚಾರ ಮಂಥನ ನಡೆಸಲು ವೇದಿಕೆ ಒದಗಿಸಿ ಕನ್ನಡ ಸಾಹಿತ್ಯದ ಹಿರಿಮೆಯ ಬಗ್ಗೆ ಯುವ ಪೀಳಿಗೆಯಲ್ಲಿ ಅರಿವು ಮೂಡಿಸಲಾಗುವುದೆಂದು ಅವರು ವಿವರಿಸಿದರು.

ವಚನ ಸಾಹಿತ್ಯ ಮತ್ತು ಕುವೆಂಪುರವರ ವಿಶ್ವಮಾನವ ಸಂದೇಶದ ಮೂಲಕ ಕನ್ನಡ ಭಾಷೆ ಭಾರತೀಯ ಸಾಹಿತ್ಯಕ್ಕೆ ಅಮೋಘ ಕೊಡುಗೆ ನೀಡಿದ್ದು ವಿದ್ಯಾರ್ಥಿಗಳಲ್ಲಿ ವೈಚಾರಿಕ ದೃಷ್ಟಿಕೋನ ಉತ್ತೇಜಿಸುವ ನಿಟ್ಟಿನಲ್ಲಿ ನಿರಂತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಾಗಿ ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ವಿಮರ್ಶಕಿ ಮತ್ತು ಲೇಖಕರಾದ ಪ್ರೊ.ಎಂ.ಎಸ್.ಆಶಾದೇವಿಯವರು ವ್ಯಕ್ತಿ ಸ್ವಾತಂತ್ರ್ಯ ಮತ್ತು ಆತ್ಮಗೌರವವನ್ನು ಕನ್ನಡಿಗರು ಸದಾ ಎತ್ತಿಹಿಡಿಯುತ್ತಾ ಬಂದಿದ್ದಾರೆಂದು ಪ್ರತಿಪಾದಿಸಿದರು.

ಕುವೆಂಪು ವಿರಚಿತ ನಾಡಗೀತೆಯಲ್ಲಿ ಬೌದ್ಧ ಪದ ಸೇರ್ಪಡೆಗೆ ಯಾವುದೇ ಅಭ್ಯಂತರವಿಲ್ಲವೆಂದು ತಿಳಿಸಿದ ಅವರು ಸರ್ವ ಜನಾಂಗದ ಶಾಂತಿಯ ತೋಟದ ಪರಿಕಲ್ಪನೆ ಸಕಲರನ್ನೂ ಒಳಗೊಂಡಿದೆ ಎಂದು ವಿಶ್ಲೇಷಿಸಿದರು.

ಸಮಾಜದಲ್ಲಿ ಸಹಿಷ್ಣುತೆಯ ವಿವೇಕ ಕುಂದುತ್ತಿರುವ ಬಗ್ಗೆ ಅಪಾರ ವಿಷಾದ ವ್ಯಕ್ತಪಡಿಸಿದ ಅವರು ಸಂಕುಚಿತ ಪ್ರವೃತ್ತಿ ಮತ್ತು ಮೂಲಭೂತವಾದ ಜಗತ್ತನ್ನು ಕಾಡುತ್ತಿರುವ ಅತಿದೊಡ್ಡ ಸವಾಲಾಗಿದೆ ಎಂದು ಬಣ್ಣಿಸಿದರು.

ಪ್ರಭುತ್ವವನ್ನು ಓಲೈಸುವ ಪರಂಪರೆ ಕನ್ನಡ ಸಾಹಿತ್ಯದ್ದಲ್ಲವೆಂದು ಸ್ಪಷ್ಟವಾಗಿ ನಿರೂಪಿಸಿದ ಅವರು ಪಂಪನಿಂದ ಬಸವಣ್ಣನವರೆಗೆ ಇದು ರುಜುವಾತಾಗಿದೆ ಎಂದು ಉಲ್ಲೇಖಿಸಿದರು.

ಒಕ್ಕೂಟ ವ್ಯವಸ್ಥೆಯ ಚೌಕಟ್ಟಿನೊಳಗೆ ಕನ್ನಡಿಗರು ತಮ್ಮ ಅಸ್ಮಿತೆ ಮತ್ತು ಸ್ವಾಭಿಮಾನವನ್ನು ಸದಾ ಎತ್ತಿಹಿಡಿದು ಅನ್ಯ ಭಾಷಿಕರ ಜೊತೆಗೂ ಸಾಮರಸ್ಯದ ಬದುಕು ಸಾಗಿಸಬೇಕಾದ ಅಗತ್ಯವನ್ನು ಅವರು ಪ್ರಸ್ತಾಪಿಸಿದರು.

ಕುಲಸಚಿವರಾದ ಎ. ನವೀನ್ ಜೋಸೆಫ್, ಪ್ರೊ.ರಮೇಶ. ಬಿ.ಕುಡೇನಟ್ಟಿ, ಸಿಂಡಿಕೇಟ್ ಸದಸ್ಯರಾದ ಕೆ.ಪಿ.ಪಾಟೀಲ್, ಡಾ.ಚೈತ್ರಾ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ. ಅಬ್ದುಲ್ ಖಾದರ್, ಡೀನರಾದ ಪ್ರೊ.ಎಂ.ನಿರ್ಮಲ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಗುರುನಾಥ ಚಲವಾದಿ ಕಾರ್ಯಕ್ರಮ ನಿರೂಪಿಸಿದರು. ಡಾ.ಮಂಜು.ಸಿ.ಎನ್. ನಾಡಗೀತೆ ಪ್ರಸ್ತುತಪಡಿಸಿದರು ಹಾಗೂ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು.


೭೧ನೇ ಕನ್ನಡ ರಾಜ್ಯೋತ್ಸವ


ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. Manmohan Singh
Bengaluru City University
೭೧ನೇ ಕನ್ನಡ ರಾಜ್ಯೋತ್ಸವ
ದಿನಾಂಕ: ೧೧-೧೧-೨೦೨೬ ಸ್ಥಳ: ಗಣಿಯಾರ ಗೋಪಾಲ ಕೃಷ್ಣ


೭೧ನೇ ಕನ್ನಡ ರಾಜ್ಯೋತ್ಸವ


ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. Manmohan Singh
Bengaluru City University
೭೧ನೇ ಕನ್ನಡ ರಾಜ್ಯೋತ್ಸವ
ದಿನಾಂಕ: ೦೧-೧೧-೨೦೨೬ ಸ್ಥಳ: ಗಣಿಯಾರ ಗೋಪುರ ಕ್ಯಾಂಪಸ್




ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. Manmohan Singh
Bengaluru City University
ಬೆಳಗಾವಿ
ದಿನಾಂಕ: ೦೧-೧೧-೨೦೨೬, ಸ್ಥಳ: ಗಡಿಯಾರ ಗೋಪುರ ಕಬ್ಬಡ


ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. Manmohan Singh
Bengaluru City University
ಒಗನೇ ಕನ್ನಡ ರಾಜ್ಯೋತ್ಸವ


ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. Manmohan Singh
Bengaluru City University
ಒಗನೇ ಕನ್ನಡ ರಾಜ್ಯೋತ್ಸವ


Dr. Manmohan Singh
Bengaluru City University
೭೧ನೇ ಕನ್ನಡ ರಾಜ್ಯೋತ್ಸವ








ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. Manmohan Singh
Bengaluru City University
೭೧ನೇ ಕನ್ನಡ ರಾಜ್ಯೋತ್ಸವ




ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. Manmohan Singh
Bengaluru City University



